## ಐಟಮ್ಮು ಫ್ರೆಶ್ ಆಗಿವೆ!

ನಾವು ಗೆಳೆಯರೆಲ್ಲಾ ಸೇರಿ ಹೊರಗಡೆ ರೆಸ್ಟೋರೆಂಟಿಗೆ ಊಟಕ್ಕೆ ಹೋಗಿದ್ದೆವು. ನಮ್ಮ ಗುಂಪಿನ ಒಬ್ಬ ಗೆಳೆಯ ಆ ದಿನ ಬೇರೆ ಊರಿಗೆ ಹೋಗಿದ್ದ. ನಾವೆಲ್ಲರೂ ಒಂದು ನಿರ್ಧಾರಕ್ಕೆ ಬಂದೆವು, ನಾವು ಹೊರಗಡೆ ಊಟಕ್ಕೆ ಹೋಗಿದ್ದು ಅವನಿಗೆ ಗೊತ್ತಾಗಬಾರದು, ಗೊತ್ತಾದರೆ ತನ್ನನ್ನು ಬಿಟ್ಟು ಊಟಕ್ಕೆ ಯಾಕೆ ಹೋಗಿದ್ದೀರೆಂದು ಅವನು ಜಗಳ ಮಾಡುವ ಭಯವಿತ್ತು.

ನಾವು ಊಟ ಮಾಡುವಾಗ ನನ್ನ ಕೀಟಲೆ ಗೆಳೆಯನೊಬ್ಬ ಊಟದ ಫೋಟೊ ತೆಗೆದು ವಾಟ್ಸ್ಆ್ಯಪ್ ಗುಂಪಿನಲ್ಲಿ ಹಂಚಿಕೊಂಡ. ತಕ್ಷಣ ಬೇರೆ ಊರಿನಲ್ಲಿನ ಗೆಳೆಯ ಕರೆ ಮಾಡಿ, ತನ್ನನ್ನು ಬಿಟ್ಟು ಊಟಕ್ಕೆ ಹೋಗಿದ್ಯಾಕೆ ಎಂದು ಕ್ಯಾತೆ ತೆಗೆದ. ಅವು ಹಳೆಯ ಫೋಟೊ, ಈಗಿನವಲ್ಲ ಎಂದು ನಾನು ಸಮಜಾಯಿಷಿ ನೀಡಿದೆ.

ಅದಕ್ಕವನು ಹಳೆಯ ಫೋಟೊ ಯಾಕಾಗುತ್ತೆ? ಅಲ್ಲಿನ ಎಲ್ಲಾ ಊಟದ



ಐಟಮ್ಮು ಫ್ರೆಶ್ ಆಗಿವೆ, ಈಗಿನವೇ ಇವೆ ಎನ್ನಬೇಕೇ?!.

ನಾನು ಹೌದಲ್ವಾ ಇದು ಈಗಿನ ಫೋಟೊನೇ ಎಂದು ಒಪ್ಪಿಕೊಂಡೆ. 'ನೋಡು, ಹೆಂಗೆ ಕಂಡುಹಿಡಿದೆ' ಎಂದು ಅವನು ನಕ್ಕ. ನನ್ನ ಜಾಣತನಕ್ಕೆ ಇಲ್ಲಿನವರು ನನ್ನ ತಲೆಬಡಿದು ನಕ್ಕರು.

**ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ**

---

## ಮೊಬೈಲ್ ಮಹಿಮೆ

ಪರಿಚಯಸ್ಥರಿಗೆ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಬೇಕಿತ್ತು. ಅವರ ಫೋನ್ ಸಮಸ್ಯೆ ಇದ್ದುದ್ದರಿಂದ ತಮ್ಮ ಪರಿಚಯಸ್ಥರಿಗೆ ಹಣ ರವಾನಿಸುವಂತೆ ತಿಳಿಸಿದರು.




ನಾನು ಫೋನ್ ಸಂಭಾಷಣೆಯಲ್ಲಿದ್ದ ಕಾರಣ ಅವರು ಹೇಳಿದ ಹಾಗೇ, ನಾನು ಹಣ ಕಳುಹಿಸಬೇಕಾದ ಫೋನ್ ನಂಬರ್ ಅನ್ನು ಒಂದು ಹಾಳೆಯಲ್ಲಿ ಬರೆದುಕೊಂಡೆ.

ಫೋನ್‌ನಲ್ಲಿ ಸರಿಯಾಗಿ ಕಾಣದಿರುವುದನ್ನು ಜೂಮ್ ಮಾಡಿ ನೋಡಿದಂತೆ, ಹಾಳೆಯಲ್ಲಿ ಬರೆದ ನಂಬರ್ ಅನ್ನು ಜೂಮ್ ಮಾಡುತ್ತಾ ಹೋದೆ. ಏನೂ ಪರಿಣಾಮವೇ ಆಗಲಿಲ್ಲ. ಆಮೇಲೆ ಹೊಳೆಯಿತು. ಅದು ಫೋನ್ ಅಲ್ಲ. ಹಾಳೆ ಮೇಲಿರುವ ಅಂಕಿ ಎಂದು.

ಫೋನ್ ನಮ್ಮ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ತಿಳಿದು ಹಣೆಗೆ ಕೈಕೊಟ್ಟು ಹಲ್ಕಿರಿದು ನಕ್ಕಿದ್ದೆ.

**ದೀಪಶ್ರೀ ಎಸ್., ಕೂಡ್ಲಿಗಿ**

**ಕಲೆ:** ಗಣೇಶ ಆಚಾರ್ಯ